

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–01–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕೆಲವು ಸಹಾಬಿಯರ ಪ್ರಸ್ತಾಪದ ಉಳಿದಿದ್ದ ಸ್ವಲ್ಪ ಭಾಗವನ್ನು ಪ್ರಸ್ತಾಪಿಸುವೆನು ಎಂದು ನಾನು ಕಳೆದ ಖುತ್ಬದಲ್ಲಿ ಹೇಳಿದ್ದೆ. ಇಂದು ಈ ಸಂಬಂಧವಾಗಿ ಮೊದಲು ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್(ರ)ರ ಕುರಿತು ಪ್ರಸ್ತಾಪಿಸುವೆನು. ಅವರ ಸಂಬಂಧ ಬನೂ ಅಸದ್ ಗೋತ್ರದೊಂದಿಗೆ ಆಗಿತ್ತು. ಅವರು ಮಧ್ಯಮ ಎತ್ತರದವರಾಗಿದ್ದರು ಮತ್ತು ಬಹಳ ದಟ್ಟವಾದ ತಲೆಗೂದಲನ್ನು ಹೊಂದಿದ್ದರು. ಒಂದು ಯುದ್ಧ ಕಾರ್ಯಾಚರಣೆಯ ಸಂದರ್ಭದಲ್ಲಿ ಅವರನ್ನು ದಂಡನಾಯಕನನ್ನಾಗಿ ಮಾಡಿಕೊಂಡು ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೀಗೆ ಹೇಳಿದರು: ಒಬ್ಬ ವ್ಯಕ್ತಿಯನ್ನು ನಿಮ್ಮ ನಾಯಕನನ್ನಾಗಿ ನಾನು ನೇಮಿಸುತ್ತಿದ್ದೇನೆ. ಅವರು ನಿಮಗಿಂತ ಉತ್ತಮರಲ್ಲವಾದರೂ ಹಸಿವು ಮತ್ತು ಬಾಯಾರಿಕೆಯನ್ನು ಸಹಿಸುವುದರಲ್ಲಿ ಅವರು ನಿಮಗಿಂತ ಹೆಚ್ಚು ಸಮರ್ಥರಾಗಿರುವರು. ಒಂದು ವರದಿಯ ಪ್ರಕಾರ ಇಸ್ಲಾಮಿನಲ್ಲಿ ಮೊತ್ತ ಮೊದಲ ಧ್ವಜದ ಆರಂಭ ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್(ರ)ರಿಂದ ಉಂಟಾಯಿತು. ಮೊತ್ತ ಮೊದಲಾಗಿ ಯುದ್ಧ ಸಂಪತ್ತನ್ನು ಸಹ ಅವರು ವಿತರಣೆ ಮಾಡಿದ್ದರು. ಅಬ್ದುಲ್ಲಾಹ್ ಬಿನ್ ಜಹಶ್(ರ)ರ ನೇತೃತ್ವದಲ್ಲಿ ಹೋಗಿದ್ದ ಒಂದು ಯುದ್ಧ ಕಾರ್ಯಾಚರಣೆಯ ಪ್ರಸ್ತಾಪವನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಮಾಡಿರುವರು. ಆ ಕಾರ್ಯಾಚರಣೆಯಲ್ಲಿ ಮುಸ್ಲಿಮರು ಪರಿಶುದ್ಧ ತಿಂಗಳಲ್ಲಿ ಯಾವುದೇ ನಿರ್ವಾಹವಿಲ್ಲದ ಕಾರಣದಿಂದ ಯುದ್ಧ ಮಾಡಿದ್ದರು. ಈ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಮುಟ್ಟಿದಾಗ ಅವರು ಬಹಳ ಅಸಂತುಷ್ಟಗೊಂಡು ನಾನು ನಿಮಗೆ ಪರಿಶುದ್ಧ ತಿಂಗಳಲ್ಲಿ ಯುದ್ಧ ಮಾಡಲು ಅನುಮತಿ ನೀಡಿರಲಿಲ್ಲ ಎಂದು ಹೇಳಿದರು. ಇದನ್ನು ಆಲಿಸಿದಾಗ ಅಬ್ದುಲ್ಲಾಹ್ ಬಿನ್ ಜಹಶ್(ರ) ಮತ್ತು ಅವರ ಸಹಚರರು ಬಹಳ ಲಜ್ಜಿತರಾದರು.

ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್(ರ)ರ ಖಡ್ಗ ಉಹದ್ ಯುದ್ಧದ ದಿನದಂದು ಮುರಿದು ಹೋಗಿತ್ತು. ಹಝ್ರತ್ ಪೈಗಂಬರ್(ಸ) ಖರ್ಜೂರದ ಒಂದು ರೆಂಬೆಯನ್ನು ಅವರಿಗೆ ದಯಪಾಲಿಸಿದರು. ಅದು ಅವರ ಕೈಯಲ್ಲಿ ಖಡ್ಗದ ಕೆಲಸವನ್ನು ಮಾಡಿತು. ಆ ದಿನದಿಂದ ಅವರು ಉರ್‌ಜೂನ್ (ಖರ್ಜೂರದ ಒಣ ಕೊಂಬೆ) ಎಂಬ ಬಿರುದು ನಾಮದಿಂದ ಪ್ರಸಿದ್ಧರಾದರು. ಅಬೂ ನಈಂ ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್(ರ) ತನ್ನ ಪ್ರಭುವಿನ ಹೆಸರಿನಲ್ಲಿ ಆಣೆ ಹೇಳಿದ, ದೈವಿಕ ಪ್ರೇಮಕ್ಕೆ ತನ್ನ ಹೃದಯದಲ್ಲಿ ಎಡೆ ನೀಡಿದ ಮತ್ತು ಮೊತ್ತ ಮೊದಲಾಗಿ ಇಸ್ಲಾಮಿನ ಧ್ವಜವನ್ನು ನಾಟಿದ ವ್ಯಕ್ತಿಯಾಗಿದ್ದರು.

ಒಂದು ಸಂದರ್ಭದಲ್ಲಿ ಹಝ್ರತ್ ಇಮಾಂ ಶುಅ್‌ಬಿಯವರು ಬನೂ ಅಸದಿನ ಆರು ಗುಣಗಳನ್ನು ಎಣಿಸಿ ಹೇಳಿದ್ದರು. ಅದರಲ್ಲಿ ಮೂರನೇ ಮತ್ತು ನಾಲ್ಕನೆಯದ್ದಾಗಿ ಅವರು ಹೀಗೆ ಪ್ರಸ್ತಾಪಿಸಿದ್ದರು: ಇಸ್ಲಾಮಿನಲ್ಲಿ ಮೊತ್ತ ಮೊದಲ ಧ್ವಜವನ್ನು ಬನೀ ಅಸದಿನ ಒಬ್ಬ ವ್ಯಕ್ತಿಯಾದ ಅಬ್ದುಲ್ಲಾಹ್ ಬಿನ್ ಜಹಶ್‌ರಿಗೆ ನೀಡಲಾಗಿತ್ತು. ಬನೂ ಅಸದಿನ ನಾಲ್ಕನೇ ವೈಶಿಷ್ಟ್ಯವೇನೆಂದರೆ, ಇಸ್ಲಾಮಿನಲ್ಲಿ ಮೊತ್ತ ಮೊದಲ ಯುದ್ಧ ಸಂಪತ್ತು ಸಹ ಬನೀ ಸಅದ್‌ನ ಅಬ್ದುಲ್ಲಾಹ್ ಬಿನ್ ಜಹಶ್(ರ) ವಿತರಣೆ ಮಾಡಿದ್ದರು. ಅಬ್ದುಲ್ಲಾಹ್ ಬಿನ್ ಜಹಶ್(ರ) ಉಹದ್ ದಿನದಂದು ಶಹೀದ್ ಆದಾಗ ಹಝ್ರತ್ ಝೈನಬ್ ಬಿನ್ತ್ ಖುಝೈಮ ಅವರ ಪತ್ನಿಯಾಗಿದ್ದರು. ಅವರು ಹುತಾತ್ಮರಾದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಝೈನಬ್(ರ)ರನ್ನು ವಿವಾಹ ಮಾಡಿದರು.

ಮುಂದಿನ ಪ್ರಸ್ತಾಪ ಹಝ್ರತ್ ಸಾಲಿಹ್ ಶಖ್‌ರಾನ್(ರ)ರದ್ದಾಗಿದೆ. ಕೆಲವರ ಪ್ರಕಾರ ಹಝ್ರತ್ ಶಕ್‌ರಾನ್(ರ) ಮತ್ತು ಉಮ್ಮೇ ಐಮನ್(ರ) ಹಝ್ರತ್ ಪೈಗಂಬರ್(ಸ)ರಿಗೆ ತನ್ನ ತಂದೆಯ ಕಡೆಯಿಂದ ವಾರಸು ಹಕ್ಕಾಗಿ ಲಭಿಸಿದ್ದರು. ಬದ್ರ್ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಅವರನ್ನು ಸ್ವತಂತ್ರಗೊಳಿಸಿದ್ದರು. ಹಝ್ರತ್ ಪೈಗಂಬರ್(ಸ) ನಿಧನರಾದಾಗ ಅವರ ಜನಾಝ್‌ಕ್ಕೆ ಸ್ನಾನ ಮಾಡಿಸಲು ಸೌಭಾಗ್ಯ ಲಭಿಸಿದ ವ್ಯಕ್ತಿಗಳಲ್ಲಿ ಹಝ್ರತ್ ಸಾಲಿಹ್ ಶಖ್‌ರಾಣ್(ರ) ಸಹ ಒಳಪಡುತ್ತಾರೆ. ಒಂದು ವರದಿಯ ಪ್ರಕಾರ ಹಝ್ರತ್ ಉಮರ್(ರ) ಹಝ್ರತ್ ಶಖ್‌ರಾನ್(ರ)ರ ಪುತ್ರನನ್ನು ಹಝ್ರತ್ ಅಬೂ ಮೂಸಾ ಅಶ್‌ಅರಿ(ರ)ರ ಬಳಿಗೆ ಕಳುಹಿಸಿದರು ಮತ್ತು ಹೀಗೆ ಪತ್ರ ಬರೆದರು: ನಾನು ನಿಮ್ಮ ಕಡೆಗೆ ಒಬ್ಬ ಸಾತ್ವಿಕ ವ್ಯಕ್ತಿಯನ್ನು ಕಳುಹಿಸುತ್ತಿರುವೆನು. ಹಝ್ರತ್ ಪೈಗಂಬರ್(ಸ)ರ ಬಳಿ ಅವರ ತಂದೆಗೆ ಇರುವ ಸ್ಥಾನದ ಪ್ರಕಾರ ನೀವು ಅವರೊಂದಿಗೆ ವರ್ತಿಸಿರಿ. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಹಝ್ರತ್ ಶಖ್‌ರಾನ್(ರ) ನಿಧನಗೊಂಡರು. ಹಝ್ರತ್ ಸಾಲಿಹ್ ಶಖ್‌ರಾನ್(ರ)ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಒಂದು ಕತ್ತೆಯ ಮೇಲೆ ಸವಾರರಾಗಿದ್ದಾಗ ನಮಾಝ್ ಮಾಡುವುದನ್ನು ನಾನು ನೋಡಿದ್ದೇನೆ. ಇದು ಸವಾರರಾಗಿರುವ ಸ್ಥಿತಿಯಲ್ಲಿ ನಮಾಝ್ ಮಾಡಬಹುದೇ ಇಲ್ಲವೇ ಎಂಬ ಪ್ರಶ್ನೆಗೆ ಇರುವ ಉತ್ತರವಾಗಿದೆ.

ಮುಂದಿನ ಪ್ರಸ್ತಾಪ ಹಝ್ರತ್ ಮಾಲಿಕ್ ಬಿನ್ ದುಖ್‌ಶಮ್‌ರದ್ದಾಗಿದೆ. ಅವರ ಹೆಸರು ಮಾಲಿಕ್ ಬಿನ್

ದುಖ್ಶೀಶಮ್ ಅಥವಾ ಇಬ್ನು ದುಖ್ಶಶಮ್ ಎಂದೂ ವರದಿಯಾಗಿದೆ. ಸುಹೈಲ್ ಬಿನ್ ಅಮ್ರ್‌ರನ್ನು ಬಂಧಿಸಿದ ಸಂದರ್ಭದಲ್ಲಿ ಹಝ್ರತ್ ಮಾಲಿಕ್(ರ) ಹೇಳಿದ ಪದ್ಯದಲ್ಲಿ ಹೀಗೆ ಪ್ರಸ್ತಾಪ ಬರುತ್ತದೆ: ನಾನು ಸುಹೈಲ್ ಬಿನ್ ಅಮ್ರ್‌ರನ್ನು ಬಂಧಿಸಿದೆ. ಅವರ ಬದಲಾಗಿ ನಾನು ಯಾವುದೇ ಸಮುದಾಯದ ಬೇರೆ ವ್ಯಕ್ತಿಯನ್ನು ಕೈದಿಯನ್ನಾಗಿ ಮಾಡಲು ಬಯಸುವುದಿಲ್ಲ. ಉಹದ್ ಯುದ್ಧದ ದಿನದಂದು ಮಾಲಿಕ್ ಬಿನ್ ದುಖ್ಶಶಮ್ ಹಝ್ರತ್ ಖ಼ಾರಿಜ(ರ)ರ ಬಳಿಯಿಂದ ಸಾಗಿದರು. ಅವರ ದೇಹದ ಮೇಲೆ 13 ಗಾಯಗಳಿದ್ದುವು. ಮಾಲಿಕ್(ರ) ಅವರೊಡನೆ ಹೇಳಿದರು: ಮುಹಮ್ಮದ್(ಸ)ರನ್ನು ವಧಿಸಲಾಗಿದೆ ಎಂಬ ಸಂಗತಿ ನಿಮಗೆ ಗೊತ್ತಿದೆಯೇ? ಆಗ ಹಝ್ರತ್ ಖ಼ಾರಿಜ(ರ) ಹೇಳಿದರು: ಇದು ಸತ್ಯವೆಂದಾದರೂ ಅಲ್ಲಾಹನು ಜೀವಂತನಾಗಿರುವನು. ಅವನಿಗೆ ಮರಣವಿಲ್ಲ. ಮುಹಮ್ಮದ್(ಸ) ಇಸ್ಲಾಮಿನ ಸಂದೇಶವನ್ನು ತಲುಪಿಸಿರುವರು. ಆದ್ದರಿಂದ ನೀವು ಸಹ ತಮ್ಮ ದೀನಿಗಾಗಿ ಯುದ್ಧ ಮಾಡಿರಿ. ಮತ್ತೊಂದು ವರದಿ ಪ್ರಕಾರ ಹಝ್ರತ್ ಮಾಲಿಕ್(ರ) ಸಅದ್ ಬಿನ್ ರಬೀಅ್(ರ)ರ ಸಮೀಪದಿಂದ ದಾಟಿ ಹೋದರು. ಅವರ ದೇಹದ ಮೇಲೆ 12 ಗಾಯಗಳಿದ್ದುವು. ಹಝ್ರತ್ ಮಾಲಿಕ್(ರ) ಅವರೊಡನೆ ಸಹ ಇದೇ ಮಾತನ್ನು ಹೇಳಿದಾಗ ಸಅದ್ ಬಿನ್ ರಬೀಅ್(ರ) ಹೇಳಿದರು: ಮುಹಮ್ಮದ್(ಸ) ತನ್ನ ಪ್ರಭುವಿನ ಸಂದೇಶವನ್ನು ತಲುಪಿಸಿರುವರು. ಆದ್ದರಿಂದ ಇಸ್ಲಾಮಿನ ಪರವಾಗಿ ನೀವು ಹೋರಾಡಿರಿ.

ಜನರಲ್ಲಿ ಕೆಲವರು ಹಝ್ರತ್ ಪೈಗಂಬರ್(ಸ)ರೊಡನೆ ಹಝ್ರತ್ ಮಾಲಿಕ್‌ರ ಬಗ್ಗೆ ಹೀಗೆ ಹೇಳಿದರು: ಮಾಲಿಕ್ ಕಪಟವಿಶ್ವಾಸಿಗಳಿಗೆ ಅಭಯದಾತರಾಗಿರುವರು. ಹಝ್ರತ್ ಪೈಗಂಬರ್(ಸ) ಕೇಳಿದರು: ಅವರು ನಮಾಝ್ ನಿರ್ವಹಿಸುವುದಿಲ್ಲವೇ? ಜನರು ಹೇಳಿದರು: ಅವರು ನಮಾಝ್ ನಿರ್ವಹಿಸುತ್ತಾರೆ. ಆದರೆ ಅದು ಯಾವುದೇ ಒಳಿತಿಲ್ಲದ ನಮಾಝ್ ಆಗಿದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಮಾಝ್ ನಿರ್ವಹಿಸುವವರನ್ನು ವಧಿಸುವುದರಿಂದ ನನ್ನನ್ನು ತಡೆಯಲಾಗಿದೆ.

ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಮಾಲಿಕ್ ಬಿನ್ ದುಖ್ಶಶಮ್‌ರೊಂದಿಗೆ ಆಸಿಂ ಬಿನ್ ಅದ್ದಿರನ್ನು ಮಸ್ಜಿದ್ ಝಿರಾರನ್ನು ಕೆಡವಿ ಹಾಕಲು ಕಳುಹಿಸಿದ್ದರು. ಹಝ್ರತ್ ಮಾಲಿಕ್(ರ)ರ ಸಂತಾನ ಪರಂಪರೆ ಮುಂದುವರೆಯಲಿಲ್ಲ ಎಂದು ಅವರ ಕುರಿತು ಪ್ರಸ್ತಾಪಿಸಲಾಗಿದೆ.

ಮುಂದಿನ ಪ್ರಸ್ತಾಪ ಹಝ್ರತ್ ಉಕಾಶ(ರ)ರದ್ದಾಗಿದೆ. ಹಿಜರೀ 12ರಲ್ಲಿ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಅವರು ಶಹೀದ್ ಆದರು. ಇಮಾಂ ಶಾಫೀ ಹೇಳುತ್ತಾರೆ: ಸ್ವರ್ಗಕ್ಕೆ ಅರ್ಹರಾದ ಒಬ್ಬ ವ್ಯಕ್ತಿಯಿದ್ದರು. ಆದರೂ ಅವರು ಭೂಮಿಯಲ್ಲಿ ವಿನಯದಿಂದ ನಡೆಯುತ್ತಿದ್ದರು. ಅವರು ಉಕಾಶ(ರ) ಆಗಿದ್ದರು. ಬದ್ರ್ ಯುದ್ಧವಾದ ಕೂಡಲೇ ಹಿಜರೀ 2ರಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್‌ರನ್ನು ಒಂದು ಕಾರ್ಯಾಚರಣೆಗಾಗಿ ಕಳುಹಿಸಿದರು. ಆ ಯುದ್ಧದಲ್ಲಿ ಉಕಾಶ(ರ) ಕೂಡ ಅಬ್ದುಲ್ಲಾಹ್‌ರ ಜೊತೆಗೆ ಇದ್ದರು. ಉಹದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಸತತವಾಗಿ ಬಿಲ್ಲುಗಾರಿಕೆ ನಡೆಸುತ್ತಿದ್ದರು. ಇದರಿಂದ ಬಿಲ್ಲಿನ ಒಂದು ಭಾಗ ತುಂಡಾಯಿತು. ಬಿಲ್ಲನ್ನು ಕಟ್ಟಲು ಹಝ್ರತ್ ಉಕಾಶ(ರ) ದಾರವನ್ನು ಹಝ್ರತ್ ಪೈಗಂಬರ್(ಸ)ರಿಂದ ಪಡೆದರು. ಆದರೆ ಆ ದಾರ ಸಣ್ಣದಾಗಿತ್ತು. ದಾರ ಸಣ್ಣದು ಎಂದು ಅವರು ಹೇಳಿದಾಗ ಹಝ್ರತ್ ಪೈಗಂಬರ್(ಸ) ಅದನ್ನು ಎಳೆಯಲು ಹೇಳಿದರು. ಹಝ್ರತ್ ಉಕಾಶ(ರ) ಹೇಳುತ್ತಾರೆ: ನಾನು ದಾರವನ್ನು ಎಳೆದಾಗ, ಅಲ್ಲಾಹನಾಣೆ ಅದು ಎಷ್ಟು ಉದ್ದವಾಯಿತು ಎಂದರೆ, ನಾನು ಬಿಲ್ಲಿನ ಮೇಲ್ಭಾಗದಲ್ಲಿ ಅದರಿಂದ ಎರಡು ಮೂರು ಕಟ್ಟನ್ನು ಕೂಡ ಕಟ್ಟಿದೆ.

ಒಂದು ಕಾರ್ಯಾಚರಣೆಯ ವೇಳೆ ಹಝ್ರತ್ ಪೈಗಂಬರ್(ಸ) ಮದೀನದ ಮೇಲೆ ಅಪಾಯದ ಬಗ್ಗೆ ಘೋಷಿಸಿದಾಗ ಕುದುರೆ ಸವಾರರು ಹಝ್ರತ್ ಪೈಗಂಬರ್(ಸ)ರ ಸುತ್ತ ಒಟ್ಟುಗೂಡಿದರು. ಆ ಸವಾರರಲ್ಲಿ ಹಝ್ರತ್ ಉಕಾಶ(ರ) ಸಹ ಇದ್ದರು.

ಮುಂದಿನ ಪ್ರಸ್ತಾಪ ಹಝ್ರತ್ ಖ಼ಾರಿಜ ಬಿನ್ ಝೈದ್(ರ)ರದ್ದಾಗಿದೆ. ಅವರ ಉಪನಾಮ ಅಬೂಝೈದ್ ಎಂದಾಗಿತ್ತು. ಕೆಲವು ಸಹಾಬಿಯರ ಜೊತೆಗೆ ಅವರು ಯಹೂದಿಯರೊಡನೆ ತೌರಾತಿನಲ್ಲಿ ಪ್ರಸ್ತಾಪಿಸಲಾದ ಕೆಲವು ಸಂಗತಿಗಳ ಬಗ್ಗೆ ಪ್ರಶ್ನಿಸಿದಾಗ ಯಹೂದಿಯರು ಹೇಳಲು ನಿರಾಕರಿಸಿದರು. ಅದರ ಬಗ್ಗೆ ಪವಿತ್ರ ಖುರ್‌ಆನಿನ ದಿವ್ಯವಾಣಿಯೂ ಅವತೀರ್ಣಗೊಂಡಿತು.

ಮುಂದಿನ ಪ್ರಸ್ತಾಪ ಝಿಯಾದ್ ಬಿನ್ ಲಬೀದ್(ರ)ರದ್ದಾಗಿದೆ. ಅವರ ಉಪನಾಮ ಅಬೂ ಅಬ್ದುಲ್ಲಾಹ್ ಎಂದಾಗಿತ್ತು. ಅವರ ಸಂತಾನ ಮದೀನ ಮತ್ತು ಬಗ್‌ದಾದಿನಲ್ಲಿ ನೆಲೆಸಿತ್ತು. ಹಝ್ರತ್ ಝಿಯಾದ್(ರ)ರನ್ನು ಹಝ್ರತ್ ಪೈಗಂಬರ್(ಸ) ಒಂದು ಸಮುದಾಯದ ಕಡೆಗೆ ದೀನ್ ಕಲಿಸಲಿಕ್ಕಾಗಿಯೂ ಕಳುಹಿಸಿದ್ದರು. ಅವರು ಹಿಜರೀ 41ರಲ್ಲಿ ಹಝ್ರತ್ ಮುಆವಿಯ(ರ)ರ ಆಡಳಿತ ಕಾಲದಲ್ಲಿ ನಿಧನರಾದರು.

ಮುಂದಿನದ್ದು ಹಝ್ರತ್ ಖ಼ಾಲಿದ್ ಬಿನ್ ಬುಕೈರ್(ರ)ರ ಪ್ರಸ್ತಾಪ. ಅವರು ಬನೂ ಸಅದ್ ಗೋತ್ರದೊಂದಿಗೆ ಸಂಬಂಧ ಹೊಂದಿದ್ದರು. ಅವರನ್ನು ಹಝ್ರತ್ ಪೈಗಂಬರ್(ಸ) ದೀನೀ ಶಿಕ್ಷಣ ನೀಡಲಿಕ್ಕಾಗಿ ಮತ್ತು ಪವಿತ್ರ ಖುರ್‌ಆನ್ ಕಲಿಸಲಿಕ್ಕಾಗಿ ಒಂದು ಸಮುದಾಯದ ಕಡೆಗೆ ಇತರ ಐದು ಸಹಾಬಿಯರ ಜೊತೆಗೆ ಕಳುಹಿಸಿದರು. ಆ ಸಮುಯದಾಯದವರು ದೀನ್ ಕಲಿಸಲಿಕ್ಕಾಗಿ ಅವರನ್ನು ಜೊತೆಗೆ ಕೊಂಡು ಹೋಗಿದ್ದರು. ಅನಂತರ ಮೋಸದಿಂದ ಶಹೀದ್ ಮಾಡಿದ್ದರು.

ಮುಂದಿನದ್ದು ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ)ರ ಪ್ರಸ್ತಾಪ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ) ಗುಲಾಮನಾದ ಅಮ್ಮಾರ್‌ನ ಸಮೀಪದಿಂದ ದಾಟಿ ಹೋದರು ಮತ್ತು ಅವರ ಯೋಗಕ್ಷೇಮ ವಿಚಾರಿಸಿಕೊಂಡರು. ಅಮ್ಮಾರ್ ಹೇಳಿದರು: ಶತ್ರುಗಳು ನನ್ನನ್ನು ಹೊಡೆಯುತ್ತಾ ಹೋದರು ಮತ್ತು ನಿಮ್ಮ ವಿರುದ್ಧವಾಗಿ ಹೇಳುವ ತನಕ ನನ್ನನ್ನು ಬಿಡಲಿಲ್ಲ. ಹಝ್ರತ್ ಪೈಗಂಬರ್(ಸ) ಕೇಳಿದರು: ನಿನ್ನ ಹೃದಯದಲ್ಲಿ ಏನಿತ್ತು?

ಅಮ್ಮಾರ್[ರ] ಹೇಳಿದರು: ಹೃದಯದಲ್ಲಿ ಅಚಂಚಲವಾದ ಸತ್ಯವಿಶ್ವಾಸ. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: ಹೃದಯ ಸತ್ಯವಿಶ್ವಾಸದಲ್ಲಿ ಸಂತೃಪ್ತಗೊಂಡಿತ್ತು ಎಂದಾದರೆ, ಅಲ್ಲಾಹನು ನಿಮ್ಮ ಬಲಹೀನತೆಯನ್ನು ಕ್ಷಮಿಸುವನು.

ಹಝ್ರತ್ ಉಸ್ಮಾನ್[ರ]ರ ಖಿಲಾಫತ್ ಕಾಲದಲ್ಲಿ ಎದ್ದಿದ್ದ ಪಿತೂರಿ ವರ್ಧಿಸಿದಾಗ ಸಹಾಬಿಯರಿಗೂ ಪತ್ರಗಳು ಬರಲು ಆರಂಭವಾಗಿತ್ತು. ಗವರ್ನರ್‌ಗಳ ಕುರಿತು ಪತ್ರಗಳಲ್ಲಿ ಬರೆಯಲಾದ ಸಂಗತಿಗಳನ್ನು ಸಹಾಬಿಯರು ಹಝ್ರತ್ ಉಸ್ಮಾನ್[ರ]ರಿಗೆ ತಿಳಿಸಿದರು. ಸಮಾಲೋಚನೆಯ ನಂತರ ಕೆಲವು ಸಹಾಬಿಯರನ್ನು ತನಿಖೆಗಾಗಿ ಕಳುಹಿಸಲಾಯಿತು. ತನಿಖೆಗಾಗಿ ಹೋದ ಎಲ್ಲ ಸಹಾಬಿಯರು ಸಕಾರಾತ್ಮಕ ಮಾಹಿತಿಯನ್ನು ಕಳುಹಿಸಿದರು. ಆದರೆ ಅಮ್ಮಾರ್[ರ]ರ ಕಡೆಯಿಂದ ಯಾವುದೇ ಉತ್ತರ ಲಭಿಸಲಿಲ್ಲ. ಸಾಕಷ್ಟು ತಡವಾದ ಕಾರಣದಿಂದ ಅಮ್ಮಾರ್[ರ] ಕೊಲ್ಲಲ್ಪಟ್ಟಿರಬಹುದು ಎಂದು ಭಾವಿಸಲಾಯಿತು. ಆದರೆ ನಿಜಸ್ಥಿತಿ ಏನಾಗಿತ್ತು ಎಂದರೆ, ಅವರು ತನ್ನ ಸರಳತೆ ಮತ್ತು ರಾಜಕೀಯ ಪರಿಜ್ಞಾನದ ಕೊರತೆಯ ಕಾರಣದಿಂದ ಗಲಭೆಗಾರರ ಮುಷ್ಠಿಯಲ್ಲಿ ಸಿಲುಕಿಕೊಂಡಿದ್ದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಅಮ್ಮಾರ್ ಬಿನ್ ಯಾಸಿರ್[ರ] ಆ ಗಲಭೆಗಾರರಿಂದ ಮೋಸಕ್ಕೆ ಒಳಗಾಗಲು ಒಂದು ವಿಶೇಷವಾದ ಕಾರಣವಿತ್ತು. ಅದೇನೆಂದರೆ, ಅಮ್ಮಾರ್[ರ] ಈಜಿಪ್ಟಿಗೆ ತಲುಪಿದ ಕೂಡಲೇ ಗಲಭೆಕೋರರು ಅವರನ್ನು ತಮ್ಮ ನಿಯಂತ್ರಣದಲ್ಲಿ ಇರಿಸಿದರು. ತಮ್ಮ ವಾಕ್ಚಾತುರ್ಯದಿಂದ ಗಲಭೆಗಾರರು ಈಜಿಪ್ಟಿನ ಅಧಿಕಾರಿಯ ವಿರುದ್ಧ ದೂರುಗಳನ್ನು ಹೇಳಲು ಶುರು ಮಾಡಿದರು. ಅಮ್ಮಾರ್ ಬಿನ್ ಯಾಸಿರ್[ರ] ತನ್ನ ಸರಳತೆಯ ಕಾರಣದಿಂದ ಆ ದೂರುಗಳನ್ನು ಸರಿಯೆಂದು ಒಪ್ಪಿಕೊಂಡಿದ್ದರು.

ಸಿಫ್ಫೀನ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಅಮ್ಮಾರ್ ಬಿನ್ ಯಾಸಿರಿಗೆ ಸತ್ಯದ ಅರಿವಾಯಿತು. ಆ ಪಿತೂರಿಗಾರರು ಯಾವ ರೀತಿಯಲ್ಲಿ ತುಂಟತನದಿಂದ ಗಲಭೆ ಎಬ್ಬಿಸಿ ಹಝ್ರತ್ ಉಸ್ಮಾನ್[ರ]ರನ್ನು ಶಹೀದ್ ಮಾಡಿದರು ಎಂದು ಅವರಿಗೆ ಗೊತ್ತಾಯಿತು. ಸಿಫ್ಫೀನ್ ಯುದ್ಧದಲ್ಲಿ ಅವರು ಅತ್ಯಂತ ಧೈರ್ಯದಿಂದ ಯುದ್ಧದಲ್ಲಿ ಪಾಲ್ಗೊಂಡು ಹುತಾತ್ಮ ಪದವಿಯನ್ನು ಗಳಿಸಿದರು.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಒಂದು ದುಃಖಕರವಾದ ವಾರ್ತೆಯೂ ಇದೆ. ಬುರ್ಕಿನಾ ಫಾಸೋದಲ್ಲಿ ಮೊನ್ನೆ ನಮ್ಮ ಒಂಬತ್ತು ಅಹ್ಮದಿಯರನ್ನು ಅತ್ಯಂತ ಬರ್ಬರವಾಗಿ ಶಹೀದ್ ಮಾಡಲಾಯಿತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಸತ್ಯವಿಶ್ವಾಸದ ಪರೀಕ್ಷೆ ಸಹ ಆಗಿತ್ತು. ಅವರು ಅದರಲ್ಲಿ ಸ್ಥಿರಚಿತ್ತರಾದರು. ಭಯೋತ್ಪಾದಕರು ಒಂದೇ ಸವನೇ ಫೈರಿಂಗ್ ಮಾಡಿರಲಿಲ್ಲ. ಬದಲಾಗಿ, ಒಬ್ಬೊಬ್ಬರನ್ನು ಕರೆದು ಶಹೀದ್ ಮಾಡಲಾಗಿತ್ತು. ಅವರ ವಿಶದ ವಿವರಣೆಗಳು ಸ್ವಲ್ಪ ಬಂದಿವೆ. ಸ್ವಲ್ಪ ಈಗ ಬರುತ್ತಿವೆ. ಅವರ ಪ್ರಸ್ತಾಪ ನಾನು ಮುಂದಿನ ಖುತ್ಬದಲ್ಲಿ ಮಾಡುವೆನು – ಇನ್‌ಶಾ ಅಲ್ಲಾಹ್.

(ಅಲ್ಲಾಹನು ಹುತಾತ್ಮರ ಪದವಿಯನ್ನು ಉನ್ನತಗೊಳಿಸಲಿ ಎಂದು ಹುಝೂರ್ ದುಆ ಮಾಡಿದರು. ಜಮಾಅತಿನ ಸದಸ್ಯರನ್ನು ಸಂಬೋಧಿಸುತ್ತಾ ಹುಝೂರ್ ಹೇಳಿದರು:) ಅಲ್ಲಿನ ಸ್ಥಿತಿಗತಿಗಳು ಈಗಲೂ ಕೆಟ್ಟಿವೆ. ಭಯೋತ್ಪಾದಕರು ಬೆದರಿಕೆ ನೀಡಿ ಹೋಗಿರುವರು. ಅವರಿಗಾಗಿಯೂ ದುಆ ಮಾಡುತ್ತಿರಿ. ಅಲ್ಲಾಹನು ಎಲ್ಲ ಕೆಡುಕಿನಿಂದ ಅವರನ್ನು ಸುರಕ್ಷಿತವಾಗಿರಿಸಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ○ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis[atba]***
*At, **'Masjid Mubarak'**, Islamabad, Tilford, UK, on 13-01-2023*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
**Email**: *khutuba.kannada@gmail.com*
**You can find all the Sermons archived at**: www.alislam.org/friday-sermon